# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.**

www.karunadu.gov.in/gdcrib. & Email-gdcribangalore@gmail.com ☎:26705053/26703176.


ಸಂಖ್ಯೆ:ಸದಂಕಾಸಂಸಂ/ಸಿಬ್ಬಂದಿ(1)/30/2016–17

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ: 17/1/18

## ಅಧಿಸೂಚನೆ

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಲ್ಲಿನ ವಿವಿಧ ವಿಭಾಗಗಳ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರ ದಿನಾಂಕ:01.12.2017ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:08.12.2017ರಂದು ಪ್ರಕಟಿಸಲಾಗಿತ್ತು. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಿದ್ದರೆ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಮರ್ಥನಿಯವಾದ ಅಗತ್ಯ ದಾಖಲಾತಿಗಳೊಂದಿಗೆ ಈ ಜೇಷ್ಠತಾ ಪಟ್ಟಿ ಪ್ರಕಟಿಸಿದ 15 ದಿನಗಳೊಳಗಾಗಿ ಈ ಸಂಸ್ಥೆಯ ನಿರ್ದೇಶಕರಿಗೆ ಸಲ್ಲಿಸುವಂತೆ ಆಹ್ವಾನಿಸಲಾಗಿತ್ತು. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಪ್ರಾಧ್ಯಾಪಕರ ಹುದ್ದೆಯಲ್ಲಿ 02 ಮತ್ತು ಸಹ ಪ್ರಾಧ್ಯಾಪಕರ ವೃಂದದಲ್ಲಿ 01 ಆಕ್ಷೇಪಣೆಗಳು ಸ್ವೀಕೃತವಾಗಿರುತ್ತದೆ. ಸ್ವೀಕೃತವಾಗಿರುವ ಆಕ್ಷೇಪಣೆ ಸಲಹೆಗಳನ್ನು ಪರಿಶೀಲಿಸಿದೆ. ಅವುಗಳನ್ನು ಪರಿಶೀಲಿಸಿರುವ ಕುರಿತು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ. ಹಾಗೂ ದಿನಾಂಕ:01.12.2017ರಲ್ಲಿದ್ದಂತೆ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ–2ರಲ್ಲಿರುವಂತೆ ಪ್ರಕಟಿಸಿದೆ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು:–**

1) ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಓರಲ್ ಮೆಡಿಸನ್, ಓರಲ್ ಸರ್ಜರಿ, ಪೆರಿಯೋಡಾಂಟಿಕ್ಸ್, ಕನ್ಸ್‌ರವೇಟಿವ್ ಡೆಂಟಿಸ್ಟ್ರಿ, ಪಿಡೋಡಾಂಟಿಕ್ಸ್, ಆರ್ಥೋಡಾಂಟಿಕ್ಸ್, ಪ್ರಾಸ್ಥೋಡಾಂಟಿಕ್ಸ್, ಓರಲ್ ಪೆಥಾಲಜಿ ಮತ್ತು ಕಮ್ಯೂನಿಟಿ ಡೆಂಟಿಸ್ಟ್ರಿ ವಿಭಾಗ, ಸದಂಕಾಸಂಸಂ, ಬೆಂಗಳೂರು ರವರ ಗಮನಕ್ಕೆ ತರುತ್ತಾ ಸದರಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಯಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರ ಗಮನಕ್ಕೆ ತರಲು ಸೂಚಿಸಿದೆ.

2) ಆಡಳಿತಾಧಿಕಾರಿಗಳು/ಲೆಕ್ಕಾಧಿಕಾರಿಗಳು, ಸದಂಕಾಸಂಸಂ, ಬೆಂಗಳೂರು.

3) ಕಛೇರಿ ಪ್ರತಿ.

**ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು**

**(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)**

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.**

gdcribangalore@gmail.com

ಸಂಖ್ಯೆ:ಸದಂಕಾಸಂಸಂ/ಸಿಬ್ಬಂದಿ(1)/30/2016–17

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ: 17/1/18

# ಅಧಿಸೂಚನೆ

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಲ್ಲಿನ ವಿವಿಧ ವಿಭಾಗಗಳ ಸಹಾಯಕ ಪ್ರಾಧ್ಯಾಪಕರು ದಿನಾಂಕ:01.12.2017ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:19.12.2017ರಂದು ಪ್ರಕಟಿಸಲಾಗಿತ್ತು. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಿದ್ದರೆ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಮರ್ಥನಿಯವಾದ ಅಗತ್ಯ ದಾಖಲಾತಿಗಳೊಂದಿಗೆ ಈ ಜೇಷ್ಠತಾ ಪಟ್ಟಿ ಪ್ರಕಟಿಸಿದ 15 ದಿನಗಳೊಳಗಾಗಿ ಈ ಸಂಸ್ಥೆಯ ನಿರ್ದೇಶಕರಿಗೆ ಸಲ್ಲಿಸುವಂತೆ ಆಹ್ವಾನಿಸಲಾಗಿತ್ತು. ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ 02 ಆಕ್ಷೇಪಣೆಗಳು ಸ್ವೀಕೃತವಾಗಿರುತ್ತದೆ. ಸ್ವೀಕೃತವಾಗಿರುವ ಆಕ್ಷೇಪಣೆ ಸಲಹೆಗಳನ್ನು ಪರಿಶೀಲಿಸಿದೆ. ಅವುಗಳನ್ನು ಪರಿಶೀಲಿಸಿರುವ ಕುರಿತು ವಿವರಗಳನ್ನು ಅನುಬಂಧ–01ರಲ್ಲಿ ನೀಡಿದೆ. ಹಾಗೂ ದಿನಾಂಕ:01.12.2017ರಲ್ಲಿದ್ದಂತೆ ಸಹಾಯಕ ಪ್ರಾಧ್ಯಾಪಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ–2ರಲ್ಲಿರುವಂತೆ ಪ್ರಕಟಿಸಿದೆ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು:**

1) ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಓರಲ್ ಮೆಡಿಸನ್, ಓರಲ್ ಸರ್ಜರಿ, ಪೆರಿಯೋಡಾಂಟಿಕ್ಸ್, ಕನ್ಸರವೇಟಿವ್ ಡೆಂಟಿಸ್ಟ್ರಿ, ಪಿಡೋಡಾಂಟಿಕ್ಸ್, ಆರ್ಥೋಡಾಂಟಿಕ್ಸ್, ಪ್ರಾಸ್ಥೋಡಾಂಟಿಕ್ಸ್, ಓರಲ್ ಪೆಥಾಲಜಿ, ಕಮ್ಯೂನಿಟಿ ಡೆಂಟಿಸ್ಟ್ರಿ, ಸದಂಕಾಸಂಸಂ, ಬೆಂಗಳೂರು ರವರ ಮಾಹಿತಿಗಾಗಿ.

2) ಕಛೇರಿ ಪ್ರತಿ.

# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

## ಅನುಬಂಧ-1

**ಪ್ರಾಧ್ಯಾಪಕರು**

ದಿನಾಂಕ:08.12.2017ರಂದು ಸಂಖ್ಯೆ:ಸದಂಕಾಸಂಸಂ/ಸಿಬ್ಬಂದಿ(1)/30/2016-17ರಲ್ಲಿ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:01.12.2017ರಲ್ಲಿದ್ದಂತೆ ಪ್ರಕಟಿಸಿ ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಬಾಧಿತರಿದ್ದರೆ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಮರ್ಥನೀಯವಾದ ಅಗತ್ಯ ದಾಖಲಾತಿಗಳೊಂದಿಗೆ ಈ ಜೇಷ್ಠತಾ ಪಟ್ಟಿ ಪ್ರಕಟಿಸಿದ 15 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಸದರಿ ಜೇಷ್ಠತಾ ಪಟ್ಟಿ ದಿನಾಂಕ:13.12.2017ರಂದು ಎಲ್ಲಾ ವಿಭಾಗಗಳು ಪಡೆದುಕೊಂಡಿರುತ್ತಾರೆ. ಈ ಸಂಸ್ಥೆಯ ವತಿಯಿಂದ ಪ್ರಕಟಿಸಿರುವ ಪ್ರಾಧ್ಯಾಪಕರು ಜೇಷ್ಠತಾ ಪಟ್ಟಿಗೆ ಪೆರಿಯೋಡಾಂಟಿಕ್ಸ್ ವಿಭಾಗದ ಮುಖ್ಯಸ್ಥರಾದ ಡಾ: ಎ.ಆರ್.ಪ್ರದೀಪ್ ಹಾಗೂ ಡಾ: ಕೆ.ಸೌಂದರ್ ರಾಜ್ ರವರು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

ಪೆರಿಯೋಡಾಂಟಿಕ್ಸ್ ವಿಭಾಗದ ಮುಖ್ಯಸ್ಥರಾದ ಡಾ: ಎ.ಆರ್.ಪ್ರದೀಪ್ ರವರು ದಿನಾಂಕ:11.01.2018ರಂದು ಆಕ್ಷೇಪಣೆ ಸಲ್ಲಿಸಿ, ನನ್ನ ಜನ್ಮ ದಿನಾಂಕ, ಬಿಡಿಎಸ್ ಮತ್ತು ಎಂಡಿಎಸ್ ತೇರ್ಗಡೆ, ಸೇವೆಗೆ ಸೇರಿದ ದಿನಾಂಕ, ಬೋಧನಾನುಭವ ಮತ್ತು ಸೇವಾ ಅನುಭವ ಇವುಗಳಲ್ಲಿ ನಾನೇ ಹಿರಿಯನಾಗಿರುವುದರಿಂದ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯಲ್ಲಿ ಡಾ: ಎಂ.ಕಲಾರವರಿಗಿಂತ ನಾನೇ ಹಿರಿಯನಾಗಿರುತ್ತೇನೆ. ಆದ್ದರಿಂದ ಪ್ರಾಧ್ಯಾಪಕರ ಪಟ್ಟಿಗೆ ಹೊಸ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕೆಂದು ಕೋರಿರುತ್ತಾರೆ. ಸದರಿ ಆಕ್ಷೇಪಣಾ ಪತ್ರವು ಈ ಸಂಸ್ಥೆಯಲ್ಲಿ ದಿನಾಂಕ:12.01.2018ರಂದು ಸ್ವೀಕೃತವಾಗಿರುತ್ತದೆ. ಈ ಸಂಸ್ಥೆಯ ವತಿಯಿಂದ ಪ್ರಾಧ್ಯಾಪಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:08.12.2017ರಂದು ಪ್ರಕಟಿಸಲಾಗಿರುತ್ತದೆ. ಸದರಿ ಜೇಷ್ಠತಾ ಪಟ್ಟಿಯನ್ನು ಎಲ್ಲಾ ವಿಭಾಗಗಳು ದಿನಾಂಕ:13.12.2017ರಂದೇ ಸ್ವೀಕರಿಸಿರುತ್ತವೆ.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಿದ್ದರೆ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಸಮರ್ಥನೀಯವಾದ ಅಗತ್ಯ ದಾಖಲಾತಿಗಳೊಂದಿಗೆ ಈ ಜೇಷ್ಠತಾ ಪಟ್ಟಿ ಪ್ರಕಟಿಸಿದ 15 ದಿನಗಳೊಳಗಾಗಿ ಈ ಸಂಸ್ಥೆಯ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ದಿನಾಂಕ:08.12.2017ರಂದು ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ತಿಳಿಸಲಾಗಿರುತ್ತದೆ.

ಈ ಸಂಸ್ಥೆಯ ವತಿಯಿಂದ ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:13.12.2017ರಂದು ಎಲ್ಲಾ ವಿಭಾಗಗಳು ಸ್ವೀಕರಿಸುವುದರಿಂದ ಸ್ವೀಕೃತವಾದ 15 ದಿನಗಳೊಳಗೆ ಅಂದರೆ **ದಿನಾಂಕ:27.12.2017ರೊಳಗೆ** ಆಕ್ಷೇಪಣೆ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ. ಆದರೆ ಸದರಿಯವರು ಸಲ್ಲಿಸಿರುವ ಆಕ್ಷೇಪಣಾ ಪತ್ರವು ಈ ಸಂಸ್ಥೆಯಲ್ಲಿ ದಿನಾಂಕ:12.01.2018ರಂದು ಸ್ವೀಕೃತವಾಗಿರುತ್ತದೆ. ಸದರಿ ಆಕ್ಷೇಪಣೆ ಪತ್ರವು ನಿಗಧಿತ ಅವಧಿಯ ನಂತರ ತಲುಪಿರುವುದರಿಂದ ಸದರಿಯವರು ಸಲ್ಲಿಸಿರುವ ಆಕ್ಷೇಪಣೆ ಪತ್ರವನ್ನು ಪರಿಗಣಿಸಿರುವುದಿಲ್ಲ.

ಡಾ: ಕೆ.ಸೌಂದರ್ ರಾಜ್, ಪ್ರಾಧ್ಯಾಪಕರು, ಪ್ರಾಸ್ಥೋಡಾಂಟಿಕ್ಸ್ ವಿಭಾಗ ಇವರು ಸಂಸ್ಥೆಯ ವತಿಯಿಂದ ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ದಿನಾಂಕ:28.12.2017 ರಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

ಈ ಜೇಷ್ಠತಾ ಪಟ್ಟಿಯು ದಿನಾಂಕ:15.12.2017ರಂದು ನನ್ನ ಗಮನಕ್ಕೆ ಬಂದಿರುತ್ತದೆ. ಜೇಷ್ಠತಾ ಪಟ್ಟಿಯಲ್ಲಿ ಡಾ: ಕೆ.ಸೌಂದರ್ ರಾಜ್ ಆದ ನನ್ನ ಕ್ರ.ಸಂ.6ರಲ್ಲಿ ನೊಂದಾಯಿಸಿದೆ. ನಾನು ದಿನಾಂಕ:24.10.1986ರಂದು ಸರ್ಕಾರಿ ಸೇವೆಗೆ ಸೇರಿದ್ದು, ದಿನಾಂಕ:08.09.1998ರಿಂದ ಉಪನ್ಯಾಸಕರಾಗಿ ಈ ಸಂಸ್ಥೆಗೆ ನೇಮಕಗೊಂಡು ವೃಂದ ಬದಲಾವಣೆಯನ್ನು ದಿನಾಂಕ:02.11.1999ರಂದು ಪಡೆದಿರುತ್ತೇನೆ. ಕ್ರಮ ಸಂಖ್ಯೆ4ರಲ್ಲಿ ನಮೂದಿಸಿರುವ ಡಾ: ಮಂಜುನಾಥ್.ಪಿ.ಪುರಾಣಿಕ್ ರವರು ದಿನಾಂಕ:02.05.2008ರಂದು ನೇರ ನೇಮಕಾತಿ ಮುಖಾಂತರ ಪ್ರಾಧ್ಯಾಪಕರಾಗಿ ನೇಮಿಸಲಾಗಿದೆ. ಇದೇ ರೀತಿ ಕ್ರಮ ಸಂಖ್ಯೆ 5ರಲ್ಲಿ ನಮೂದಿಸಿರುವ ಡಾ: ಗಿರೀಶ್ ಗಿರಡ್ಡಿ ರವರು ಸಹ ದಿನಾಂಕ:12.05.2008ರಂದು ನೇರ ನೇಮಕಾತಿ ಮುಖಾಂತರ ಪ್ರಾಧ್ಯಾಪಕರ ಈ ಸಂಸ್ಥೆಗೆ ನೇಮಿಸಲಾಗಿದೆ.